ಕೊಡುವುದಕ್ಕಿಂತ ಮುಂಚಿತವಾಗಿ ಯಾರು ಜಮೀನನ್ನು ಕಳೆದುಕೊಂಡಿದ್ದಾರೆ, ಯಾರು ಮನೆ ಕಳೆದು ಕೊಂಡಿದ್ದಾರೆ, ಆ ಭೂಮಾಲೀಕರಿಗೆ ಮೊದಲು ಹಣ ಕೊಡತಕ್ಕಂಥಾದ್ದು ಎಂದು ಸರ್ಕಾರದ ಆದೇಶ ಮಾಡಿದ್ದೇವೆ. ಬಹುಶಃ ಹೊಸ ಪ್ರಾಜೆಕ್ಟ್‌ಗಳಲ್ಲಿ ಇದು ಆಗಿದೆ. ಆದರೆ 1976ರಲ್ಲಿ ಹಿಡಕಲ್ ಡ್ಯಾಮ್‌ನಲ್ಲಿ ಏನಾಗಿದೆ, ಇದು ನನಗೆ ಗೊತ್ತಿರಲಿಲ್ಲ. ತಾವು ಈಗ ಹೇಳಿದ್ದೀರಿ. ಲ್ಯಾಂಡ್ ಅಕ್ವಿಸಿಷ್ನ್ ಆಫೀಸರ್ ನಮ್ಮ ನೀರಾವರಿ ಇಲಾಖೆಗೆ ಸೇರುತ್ತಾರೆ. ಅವರಿಗೆ ಯಾವುದು ಕೋರ್ಟಿನಲ್ಲಿ ಇತ್ಯರ್ಥವಾಗಿದೆ, ಯಾವುದು ಕನ್‌ಸೆಂಟ್ ಅವಾರ್ಡ್ ಆಗಿದೆ, ಎಷ್ಟು ಹಣ ಬಿಡುಗಡೆಯಾಗಬೇಕು, ಎಂಬುದಕ್ಕೆ ನನ್ನ ಹತ್ತಿರ ಸಧ್ಯಕ್ಕೆ ಮಾಹಿತಿ ಇಲ್ಲ. ಅದನ್ನು ತರಿಸಿಕೊಂಡು ಈಗಾಗಲೇ ಇತ್ಯರ್ಥ ಆಗಿರತಕ್ಕಂಥ ಪ್ರಕರಣಗಳಿಗೆ ಕೂಡಲೇ ಹಣ ಬಿಡುಗಡೆ ಮಾಡಬೇಕು ಎಂದು ಹೇಳಿ ನಮ್ಮ ಚೀಫ್ ಇಂಜಿನಿಯರ್ ಅವರಿಗೆ ಇವತ್ತೇ ನಾನು ಕಳುಹಿಸಿಕೊಡುತ್ತೇನೆ.

(ಉ) ಮಾಜಿ ಯೋಧರಿಗೆ ಸಕಲೇಶಪುರ ತಾಲ್ಲೂಕಿನಲ್ಲಿ ಆಗಿರತಕ್ಕ ತೊಂದರೆ

ಶ್ರೀ ಡಿ. ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ನಮಗೆ ಏನೂ ಕೊಡುತ್ತಾ ಇಲ್ಲ. ಆದರೆ ಮಾಜಿ ಯೋಧರಿಗೆ ಇರುವಂಥ ಹಕ್ಕನ್ನೂ ಕಸಿಯುವಂಥ, ನಿರಾಕರಿಸುವಂಥ ವ್ಯವಸ್ಥೆ ಸಕಲೇಶಪುರ ತಾಲ್ಲೂಕಿನಲ್ಲಿ ಆಗಿದೆ. ಯಾರು ದೇಶದ ರಕ್ಷಣೆಗಾಗಿ ತಮ್ಮ ಸರ್ವಸ್ವವನ್ನೂ ಕೊಡುತ್ತಾರೆ, ಅವರಿಗೆ ಕಾನೂನು ಪ್ರಕಾರ ಸಿಗುವ ಸವಲತ್ತನ್ನು ಅಡ್ಡಿ ಮಾಡುವಂಥ ಸಂಗತಿ ಇದು. ಮೈಸೂರು ಗೆಜೆಟ್‌ನ ಮೇ 18, 1972 ರಲ್ಲಿ ಪಾರ್ಟ್-3 ರಲ್ಲಿ ಮೇ 3, 92ರ ಒಂದು ನೋಟಿಫಿಕೇಷನ್ ಪ್ರಕಾರ ಸಕಲೇಶಪುರ ತಾಲ್ಲೂಕಿನ ಹೆಬ್ಬಸಾಲೆ ಗ್ರಾಮದಲ್ಲಿ ಸರ್ವೆನಂಬರ್ 329ರಲ್ಲಿ ಇಪ್ಪತ್ತು ಎಕರೆ ಜಾಗವನ್ನು ಎಕ್ಸಸರ್ವಿಸ್‌ಮನ್ ಮತ್ತು ಸೋಲ್ಜರ್ಸ್‌ಗೆ ಮೀಸಲಾಗಿಡಲಾಗಿತ್ತು. ಆದರೆ ಇದೇ ರೀತಿ ಭಾರತ ಭೂಸೇನೆಯಲ್ಲಿ ಕೆಲಸ ಮಾಡುತ್ತಾ ಇರುವಂಥ ಕೆ. ಜಿ. ಸುಬ್ರಹ್ಮಣ್ಯ ಮತ್ತು ಕೆ. ಎಂ. ಗಣಪತಿ ಎಂದು ಹೇಳುವವರು 7-9-92ಕ್ಕೆ ಈ ಬಗ್ಗೆ ಅರ್ಜಿಯನ್ನು ಸಲ್ಲಿಸಿದ್ದು ಆ ಬಗ್ಗೆ ಶಾನುಭೋಗರಿಂದ ಮಹಜರು, ರೆವಿನ್ಯೂ ಇನ್‌ಸ್ಪೆಕ್ಟರ್ ಅವರಿಂದ ಕಡತ ಪರಿಶೀಲನೆ, ಗ್ರಾಮಸ್ಥರಿಂದ ಮಹಜರು, ಆರ್. ಎಫ್. ಓ. ಅವರಿಂದ ಮರದ ಮೌಲ್ಯಮಾಪನ, ತಹಸೀಲ್ದಾರರಿಂದ ನಡವಳಿಕೆ, ಕಾಫಿ ಬೋರ್ಡಿನಿಂದ ಸರ್ಟಿಫಿಕೇಟ್ ಅಲ್ಲದೆ ಉಪವಿಭಾಗಾಧಿಕಾರಿಯಿಂದ ಒಂದು ಎಕರೆಗೆ ಒಂದು ಸಾವಿರ ಕಿಮ್ಮತ್ತು ನೀಡಿ ಮಂಜೂರು ಮಾಡುವಂತೆ ಜಿಲ್ಲಾಧಿಕಾರಿಗಳಿಂದ ಶಿಫಾರಸ್ಸು ಕೂಡ ಆಗಿತ್ತು. ಇಷ್ಟಾದರೂ ಕೂಡ ಕಂದಾಯ ಇಲಾಖೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಅವರು ನ್ಯಾಯಕ್ಕಾಗಿ ಕರ್ನಾಟಕ ಉಚ್ಚನ್ಯಾಯಾಲಯಕ್ಕೆ ರಿಟ್ ಪಿಟಿಷನ್ ನಂಬರ್ ನಂ. 316:91ರ ಪ್ರಕಾರ ಇದನ್ನು ಕೂಡಲೇ ಪರಿಶೀಲನೆ ಮಾಡಿ ಇತ್ಯರ್ಥ ಮಾಡಬೇಕೆಂದು ಕೇಳಿಕೊಂಡರು. 3-11-97ಕ್ಕೆ ಹೈಕೋರ್ಟು ಆದೇಶವನ್ನು ನೀಡಿ ತಕ್ಷಣ ಇದನ್ನು ಇತ್ಯರ್ಥ ಮಾಡಬೇಕೆಂದು ಹೇಳಿದರೂ ಕೂಡ ಕಂದಾಯ ಇಲಾಖೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇಷ್ಟಾದಮೇಲೆ ಕಂದಾಯ ಇಲಾಖೆಯ ಕಾರ್ಯದರ್ಶಿ ಯವರಿಗೆ ನಮ್ಮ ಬಿ. ಬಿ. ಶಿವಪ್ಪನವರು ಪತ್ರ ಬರೆದಿದ್ದಕ್ಕೆ ಉಚ್ಚ ನ್ಯಾಯಾಲಯದ ಆದೇಶ ಪ್ರಕಾರ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಡಿ. ಸಿ. ಹಾಸನ ಅವರಿಗೆ ಸೂಚನೆ ಕಳಿಸಿದ್ದಾರೆ ಎಂದು ತಿಳಿಸಿದರು, ಆದರೂ ಕೂಡ ಅದರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಪುನಃ ಅವರು

ನ್ಯಾಯಕ್ಕಾಗಿ ಕರ್ನಾಟಕ ಉಚ್ಚನ್ಯಾಯಾಲಯಕ್ಕೆ ಒಂದು ರಿಟ್‌ಪಿಟಿಶನ್ ನಂ. 16931 : 97 ರ ಪ್ರಕಾರ ಸಲ್ಲಿಸಿ ಪುನಃ ಉಚ್ಚ ನ್ಯಾಯಾಲಯಕ್ಕೆ ಹೋದರು. ಹೈಕೋರ್ಟು 9.11.98ಕ್ಕೆ ನಾಲ್ಕು ವಾರದೊಳಗೆ ಇವರ ಅರ್ಜಿಯನ್ನು ವಿಲೇವಾರಿ ಮಾಡಬೇಕು, ಇತ್ಯರ್ಥ ಮಾಡಬೇಕು ಎಂದು ಆದೇಶ ಮಾಡಿದರೂ ಕೂಡ ಇಷ್ಟರತನಕ ಕಂದಾಯ ಇಲಾಖೆಯಿಂದ ಯಾವುದೇ ಕ್ರಮವನ್ನು ಕೈಗೊಳ್ಳದಿರುವುದು ತುಂಬಾ ವಿಷಾದನೀಯ ಸಂಗತಿ. ಯಾರು ಎಕ್ಸ್-ಸರ್ವಿಸ್‌ಮನ್ ಇದ್ದಾರೆ ಅವರಿಗೆ ಜಾಗವನ್ನು ಕೊಡಬೇಕು ಎಂದು ನೋಟಿಫಿಕೇಷನ್ ಆಗಿದೆ. 1972ರಿಂದ ಇದು ಇಷ್ಟರತನಕ ಇತ್ಯರ್ಥವಾಗದೇ ಇರುವಂಥಾದ್ದು ಬಹುಶಃ ಇದು ಭಾರಿ ದೊಡ್ಡ ಸಂಗತಿ. ಅದಕ್ಕಾಗಿ ನಾನು ಸರ್ಕಾರವನ್ನು ಆಗ್ರಹ ಮಾಡುತ್ತೇನೆ. ತಕ್ಷಣ ಈ ಭೂಮಿಗಳನ್ನು ಮಾಜಿ ಸೈನಿಕರಾದ ಕೆ. ಜಿ. ಸುಬ್ರಹ್ಮಣ್ಯ ಮತ್ತು ಕೆ. ಎಂ. ಗಣಪತಿ ಇವರಿಗೆ ಹೈಕೋರ್ಟ್ ಆದೇಶದ ಪ್ರಕಾರ ಮಾಡಬೇಕು. ಎರಡನೇಯದಾಗಿ ಅನಾವಶ್ಯಕ ಕಿರುಕುಳ ಕೊಟ್ಟು ಇಷ್ಟರತನಕ ವಿಳಂಬ ಮಾಡಿದಂಥ ಅಧಿಕಾರಿಗಳು ಮತ್ತು ಹೈಕೋರ್ಟಿನ ಕಾನೂನನ್ನು ಉಲ್ಲಂಘನೆ ಮಾಡಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಈ ಮೂಲಕ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಉಪಾಧ್ಯಕ್ಷರೇ, ಅದಕ್ಕೆ ನಾನೂ ಕೂಡ ಸಹಿ ಮಾಡಿದ್ದೇನೆ. ಅದು ನನ್ನ ಕ್ಷೇತ್ರಕ್ಕೆ ಬರತಕ್ಕಂಥಾದ್ದು. ಸುಮಾರು 25 ವರ್ಷಗಳಿಂದ ಇದು ಎಲ್ಲಾ ಕೋರ್ಟ್‌ಗಳಲ್ಲೂ ತಿರುಗುತ್ತಾ ಇದೆ. ಎಲ್ಲಾ ಕೋರ್ಟ್‌ಗಳಲ್ಲಿ ತಿರುಗಿ ಜಡ್ಜ್‌ಮೆಂಟ್ ಆದರೂ ಕೂಡ ಮತ್ತು ಆವತ್ತಿನ ಕಂದಾಯ ಮಂತ್ರಿಗಳಾದ ಜಿಗಜಿನಗಿಯವರು, ಸಂಬಂಧಪಟ್ಟ ಕಾರ್ಯದರ್ಶಿಯವರು ಮತ್ತು ಕಾನೂನು ಸಚಿವರು ಎಲ್ಲರೂ ಕುಳಿತುಕೊಂಡು ತೀರ್ಮಾನ ಮಾಡಿ, ಇದನ್ನು ಮಂಜೂರ್ಮಾಡಬೇಕೆಂದು ಆದರೂ ಕೂಡ ಇದುವರೆಗೆ ಆಗಿರುವುದಿಲ್ಲ. ಹಾಗಾದರೆ ಈ ಸರ್ಕಾರದಲ್ಲಿ ನಾವು ಯಾರನ್ನು ಕೇಳಬೇಕು ? ಕಂದಾಯ ಮಂತ್ರಿಗಳು, ಕಾನೂನು ಮಂತ್ರಿಗಳು ಮತ್ತು ಸಂಬಂಧಪಟ್ಟ ಕಾರ್ಯದರ್ಶಿಯವರು ಹಾಗೂ ಸಂಬಂಧಿಸಿದ ಇಲಾಖೆಯ ಎಲ್ಲಾ ಜನರೂ ಸಭೆ ಸೇರಿ, ಗಂಟೆಗಟ್ಟಲೆ ಚರ್ಚೆ ಮಾಡಿ, ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ನಿಂದ ಬಂದಿರತಕ್ಕ ಜಡ್ಜ್‌ಮೆಂಟ್‌ಗಳನ್ನು ಪರಿಶೀಲನೆ ಮಾಡಿ, ಇದನ್ನು ಮಾಡಬೇಕೆಂದು ಆದೇಶಕೊಟ್ಟರೂ ಕೂಡ ಅಲ್ಲಿಯ ಜಿಲ್ಲಾಧಿಕಾರಿಗಳು ಮಾಡಿರುವುದಿಲ್ಲ ಏಕೆ? ಅಲ್ಲಿಯ ಪೋಲಿಸಿನವರು ರಕ್ಷಣೆ ಕೊಡಿ ಎಂದು ಸರ್ಕಾರ ಆದೇಶ ಕೊಡುತ್ತದೆ. ಕೋರ್ಟ್ ಕೂಡ ರಕ್ಷಣೆ ಕೊಡಿ ಎಂದು ಆದೇಶ ಕೊಡುತ್ತದೆ. ಆದರೆ ರಕ್ಷಣೆ ಕೊಡುವುದಿಲ್ಲ. ಅಲ್ಲಿ ಕಾಫಿ ಕುಡಿಯುತ್ತಾ ಇದ್ದರೂ, ಅಲ್ಲಿರತಕ್ಕ ಪೋಲಿಸಿನವರು ಸುಮ್ಮನೇ ಇರುತ್ತಾರೆ. ನಾವೆಲ್ಲರೂ ಬೀದಿಯಲ್ಲಿ ಹಿಡಿದುಕೊಳ್ಳುತ್ತೇವೆ ನೀವು ಸುಮ್ಮನೆ ಇರಿ ಎಂದು ಹೇಳಿ 25 ವರ್ಷಗಳಿಂದ ಒಂದೇ ಸಮನೆ ಸತತವಾಗಿ ಇದೊಂದು ಕೆಲಸ ಆಗುವುದಿಲ್ಲವೆಂದು ಹೇಳುವುದಾದರೆ, ಇದರ ಹಿಂದೆ ಯಾವುದೋ ಒಂದು ಭಾರಿ ದೊಡ್ಡ ಶಕ್ತಿ ಇದೆ. ಆ ಶಕ್ತಿ ಇರುವುದರಿಂದ ಈ ಕೆಲಸ ಆಗುತ್ತಾ ಇಲ್ಲ. ಇವತ್ತು ಕೋರ್ಟಿನ ಎಲ್ಲಾ ಆದೇಶಗಳನ್ನೂ ಉಲ್ಲಂಘನೆ ಮಾಡಿದ್ದಾರೆ. ನಮಗೆ ಸರಿಯಾದ ಉತ್ತರಬೇಕು. ಸರ್ಕಾರದವರು ತಕ್ಷಣ ಕಾರ್ಯದರ್ಶಿಯವರಿಗೆ ಆದೇಶ ಕೊಡಬೇಕು, ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡಬೇಕು. ಜಿಲ್ಲಾಧಿಕಾರಿಗಳಿಗೆ ನೀವು ಅನುಮತಿ ಕೊಟ್ಟು, ಮಂಜೂರಾತಿ ಮಾಡುವಂಥ ಅಧಿಕಾರವನ್ನು ಕೊಟ್ಟಿದ್ದೀರಿ.

ಆದ್ದರಿಂದ, ಮಂಜೂರಾತಿ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಾನಂದಗೌಡರು ಮತ್ತು ಶಿವಪ್ಪನವರು ಹೇಳಿರುವುದು ನಿಜ. ಇದೊಂದು ವಿಷಾದನೀಯ ಸಂಗತಿ. ಹೈಕೋರ್ಟಿನ ಆದೇಶವಾಗಿಯೂ ತಡವಾಗಿರುವುದಕ್ಕೆ ನಾನು ಕ್ಷಮೆ ಕೇಳುತ್ತೇನೆ. ಈ ದಿವಸವೇ ಮಾನ್ಯ ಕಂದಾಯ ಸಚಿವರ ಹತ್ತಿರ ಈ ವಿಷಯವನ್ನು ಪ್ರಸ್ತಾಪ ಮಾಡಿ, ನೇರವಾಗಿ ಆದೇಶ ಹೋಗುವಂತಹ ರೀತಿಯಲ್ಲಿ ಕ್ರಮ ಕೈಗೊಳ್ಳುತ್ತೇವೆ.

೫೨) ಬಿಜಾಪುರ ನಗರ ಸಭೆಯ ಎರಡನೆಯ ಹಂತದ ಕುಡಿಯುವ ನೀರಿನ ಯೋಜನೆ

ಶ್ರೀ ಶಿವಾನಂದ ಪಾಟೀಲ್ (ಬಿಜಾಪುರ) : ಬಿಜಾಪುರ ನಗರಸಭೆಯ ಎರಡನೇ ಹಂತದ ಕುಡಿಯುವ ನೀರಿನ ಯೋಜನೆಯನ್ನು ಮೊನ್ನೆತಾನೆ ಅಂದರೆ ಫೆಬ್ರವರಿ 10 ನೇ ತಾರೀಖಿಗೆ ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಿದರು. ಈ ಯೋಜನೆಗೆ ಸರ್ಕಾರ 36 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಇಷ್ಟೊಂದು ಹಣವನ್ನು ಖರ್ಚು ಮಾಡಿರತಕ್ಕ ಈ ಯೋಜನೆಯು ಕೇವಲ ಒಂದು ತಿಂಗಳು ಹದಿನೈದು ದಿವಸಗಳ ಹಿಂದೆ ಉದ್ಘಾಟನೆಯಾಗಿದೆ. ಇವತ್ತು ಈ ಯೋಜನೆಯು ಸಂಪೂರ್ಣ ಬಂದ್ ಬಿದ್ದು 11-12 ದಿವಸ ಆಯಿತು. 12 ದಿವಸದಿಂದ ಇಡೀ ಬಿಜಾಪುರ ಜನರಿಗೆ ಕುಡಿಯುವ ನೀರು ಇಲ್ಲ. ಮೇಲಾಗಿ ತಮಗೂ ಗೊತ್ತಿದೆ, ಈ ಮಧ್ಯೆ ಎರಡು ಹಬ್ಬಗಳು ಬಂದವು. ಒಂದು ಮಹಾವೀರ ಜಯಂತಿ, ಇನ್ನೊಂದು ಬಕ್ರೀದ್. ಆವತ್ತಿನ ದಿವಸ ಬಿಜಾಪುರದ ಜನ ಇಡೀ ನಗರಸಭೆಗೆ ಮುತ್ತಿಗೆ ಹಾಕಿ, ನಗರಸಭೆಯನ್ನೇ ಹಾಳು ಮಾಡಬೇಕೆಂಬ ಒಂದು ಉದ್ರಿಕ್ತ ಪರಿಸ್ಥಿತಿ ಉಂಟಾಗಿತ್ತು. ಇದರಲ್ಲಿ ತಪ್ಪು ಇರತಕ್ಕಂತಾದ್ದು ವಾಟರ್ ಬೋರ್ಡಿನದ್ದು. ಯಾವ ವಾಟರ್ ಬೋರ್ಡಿಗೆ ಈ ಯೋಜನೆಯನ್ನು ಸಂಪೂರ್ಣವಾಗಿ ನಿರ್ವಹಿಸುವುದಕ್ಕೆ ಕೊಟ್ಟಿದ್ದಾರೆ, ಅವರೇ ಇಂತಹ ಒಂದು ಕಳಪೆ ಮಟ್ಟದ ಕಾಮಗಾರಿಗಳನ್ನು ಮಾಡಿ, ಇವತ್ತು ಬಂದ್ ಕೆಡವತಕ್ಕಂಥ ಒಂದು ಸ್ಥಿತಿಗೆ ತಂದಿಟ್ಟಿದ್ದಾರೆ. ಆದರೆ, ಜನರು ತಪ್ಪು ತಿಳುವಳಿಕೆಯಿಂದ ಬಿಜಾಪುರ ನಗರಸಭೆಗೆ ಮುತ್ತಿಗೆ ಹಾಕಿ ಹೊಡೆಯುತ್ತಿದ್ದಾರೆ. ನಾನು ಇವತ್ತು ಮಾನ್ಯ ಮಂತ್ರಿಗಳಿಗೆ ಕೇಳತಕ್ಕಂಥದ್ದು ಇಷ್ಟೆ. ಯಾವ ವಾಟರ್ ಬೋರ್ಡ್ ಅಧಿಕಾರಿ ಇಷ್ಟು ನಿರ್ಲಕ್ಷ್ಯತನದಿಂದ ಈ ಕಾರ್ಯ ನಿರ್ವಹಿಸಿದ್ದಾರೆ, ಅವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ? ಎರಡನೆಯದು, ಇದು ನಗರ ಸಭೆಯ ತಪ್ಪಿನಿಂದ ಆಗಿರತಕ್ಕಂಥಾದ್ದಲ್ಲ. ಕರ್ನಾಟಕ ನೀರು ಸರಬರಾಜು ಮಂಡಳಿಯಿಂದ ಆಗಿರತಕ್ಕಂಥ ತಪ್ಪು. ಅದಕ್ಕೆ ಏನಾದರೊಂದು ಪತ್ರಿಕಾ ಹೇಳಿಕೆ ಕೊಟ್ಟು ಬಿಜಾಪುರ ಜನತೆಗೆ, ಇದು ನಗರ ಸಭೆಯಿಂದ ಆಗಿರತಕ್ಕಂಥ ತಪ್ಪಲ್ಲ, ನಗರಸಭೆಯ ಆಸ್ತಿಯನ್ನು ಯಾವುದೇ ರೀತಿಯಲ್ಲಿ ಹಾನಿಗೀಡು ಮಾಡಬಾರದು ಎಂದು ಹೇಳಬೇಕು. ಇದನ್ನು ವಾಟರ್ ಬೋರ್ಡಿನಿಂದ ತಿದ್ದಿ ಆದಷ್ಟು ತೀವ್ರವಾಗಿ ನೀರು ಕೊಡಿಸುವುದಕ್ಕೆ ಏನು ಪ್ರಯತ್ನ ಮಾಡುತ್ತೀರಿ ಎಂಬುದನ್ನು ತಮ್ಮ ಮೂಲಕ ಸಚಿವರಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು): ಮಾನ್ಯ ಶಿವಾನಂದ ಪಾಟೀಲರು ಎತ್ತಿರತಕ್ಕ ಪ್ರಶ್ನೆ ಈಗತಾನೇ ಗಮನಕ್ಕೆ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಿರತಕ್ಕ ಈ ಯೋಜನೆ, ಹೊಸ ಯೋಜನೆ. ಅಲ್ಲಿಯ ಜನಗಳಿಗೆ 8-10 ದಿವಸಗಳಿಂದ ತೊಂದರೆಯಾಗಿದೆ ಎಂಬ